1	2	3	4	5
51	ಮಾಲೀಕಯ್ಯ ವಿ. ಗುತ್ತೇದಾರ್, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು	5,48,406	21,666	1,30,000
52.	ಕೆ.ಬಿ. ಶಾಣಪ್ಪ, ಮಾಜಿ ಅಬಕಾರಿ ಸಚಿವರು	1,24,208	6,000	-
53.	ಡಾ: ಶಂಕರ್ ನಾಯಕ್ ವೈದ್ಯಕೀಯ ಶಿಕ್ಷಣ ಸಚಿವರು	3,09,170	13,000	1,30,000
54.	ಜಿ. ಬಸವಣ್ಣಪ್ಪ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು	2,46,759	21,666	80,000
55.	ಬಿ.ಎ. ಮೊಹಿದ್ದೀನ್, ಸಣ್ಣ ಕೈಗಾರಿಕೆ ಸಚಿವರು	4,83,226	21,666	-
56.	ಬಿ. ಸೋಮಶೇಖರ್, ಉನ್ನತ ಶಿಕ್ಷಣ ಸಚಿವರು	2,70,350	21,666	-
57.	ಅನಂತ್‌ನಾಗ್, ಬೆಂಗಳೂರು ನಗರಾಭಿವೃದ್ಧಿ ಸಚಿವರು	35,295	13,000	1,30,000
58.	ಶರಣಪ್ಪಬಸಪ್ಪ ದರ್ಶನಾಪುರ್, ಇಂಧನ ರಾಜ್ಯ ಸಚಿವರು.	4,88,242	13,000	1,30,000
59.	ಹೆಚ್.ಡಿ. ರೇವಣ್ಣ, ವಸತಿ ಸಚಿವರು	5,84,858	21,666	-
60.	ಗುರುಪಾದಪ್ಪ ನಾಗಮಾರಪಲ್ಲಿ, ಅರಣ್ಯ ಸಚಿವರು	2,91,677	21,666	1,30,000
61.	ಎಂ.ಎಸ್. ಪಾಟೀಲ್, ಜವಳಿ ಸಚಿವರು	4,34,370	21,666	-

ಉಪಾಧ್ಯಕ್ಷರು : ಮಂಡಿಸಲಾಯಿತು.

ಉಪಾಧ್ಯಕ್ಷರು : ಈಗ ಶಾಸನ ರಚನಾ ಕಾರ್ಯಕಲಾಪ ನಡೆಯಲಿದೆ. ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ವಿಧೇಯಕ 1997ನ್ನು ಪರ್ಯಾಲೋಚಿಸುವ ಮತ್ತು ಅಂಗೀಕರಿಸುವ ಕಲಾಪವನ್ನು ಈಗ ಕೈಗೆತ್ತಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಆಮೇಲೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು : ಬೆಳಿಗ್ಗೆ ತೆಗೆದುಕೊಳ್ಳೋಣ ಎಂದು ಅಧ್ಯಕ್ಷರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದನ್ನು ಕುರಿತು ಹೇಳುತ್ತಿದ್ದೀರಿ?

ಉಪಾಧ್ಯಕ್ಷರು : ಈಗ ನೀವೇನೋ ಹೇಳಬೇಕೆಂದಿದ್ದೀರಲ್ಲಾ, ಅದನ್ನು ಕುರಿತು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನೇನು ಹೇಳಬೇಕೆಂದಿದ್ದೇನೆ ಎಂಬುದನ್ನು ಹೇಳಿ.

ಉಪಾಧ್ಯಕ್ಷರು : ನಿಲುವಳಿ ಸೂಚನೆ ಬಗ್ಗೆ ತಾನೇ ತಾವು ಕೇಳುತ್ತಿರುವುದು. ಈಗಾಗಲೇ ಗಂಟೆ: 6-40ಆಗುತ್ತಿದೆ. ಈ ತಿದ್ದುಪಡಿ ವಿಧೇಯಕವನ್ನು ಬಹಳ ತುರ್ತಾಗಿ ಸದನದಲ್ಲಿ ಅಂಗೀಕರಿಸಬೇಕಾಗಿದೆ ಎಂದು ಮಾನ್ಯ ಸಚಿವರು ವಿನಂತಿ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಕನಿಷ್ಟ ಒಂದು ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ದಯಮಾಡಿ ಸರ್ಕಾರದ ಪರವಾಗಿ ನನ್ನದೊಂದು ವಿನಂತಿ ಇದೆ. ಈಗ ಇಲ್ಲಿ ತಂದಿರತಕ್ಕಂತಹ ವಿಧೇಯಕದ ಕೆಲವು ತಿದ್ದುಪಡಿಗಳು ತಾಂತ್ರಿಕವಾದಂತಹ ತಿದ್ದುಪಡಿಗಳು. 15ನೇ ತಾರೀಖಿನ ದಿವಸ ಕೆಲವು ಹೊಸ ಜಿಲ್ಲೆಗಳು ಅಸ್ಥಿತ್ವಕ್ಕೆ ಬರುವುದರಿಂದ, ಇದಕ್ಕೆ ಸಂಬಂಧಿಸಿರತಕ್ಕಂತಹ ತಿದ್ದುಪಡಿಯನ್ನು ನಾವು ಮಾಡಬೇಕಾಗುತ್ತದೆ. ಇಲ್ಲಿ ಅಂಗೀಕಾರವಾದ ನಂತರ ಈ ವಿಧೇಯಕ ಮೇಲ್ಮನೆಗೆ ಹೋಗಬೇಕಾಗುತ್ತದೆ. ಮೇಲ್ಮನೆ ಅಂಗೀಕಾರ ಪಡೆದ ನಂತರ ಈ ವಿಧೇಯಕ ರಾಜ್ಯಪಾಲರ ಅಂಕಿತಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇವತ್ತು ನಾವು ಇದನ್ನು ಚರ್ಚೆಗೆ ತೆಗೆದುಕೊಂಡು ಅಂಗೀಕರಿಸಿದರೆ, ನಾಳೆ ಈ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಬಹುದಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಪ್ರಶ್ನೋತ್ತರ ಆದ ನಂತರವೇ ಇದನ್ನು ಚರ್ಚೆಗೆ ತೆಗೆದುಕೊಂಡು ಇದಕ್ಕೆ ಒಪ್ಪಿಗೆ ಕೊಡೋಣ. ಈಗ ಬೇಡ.

ಶ್ರೀ ಎಂ.ಪಿ. ಪ್ರಕಾಶ್ : ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಈ ರೀತಿಯಾಗಿ ತರಾತುರಿಯಲ್ಲಿ ವಿಧೇಯಕ ತಂದರೆ ಹೇಗೆ? ಇದು ಬಹಳ ಮುಖ್ಯವಾದ ವಿಧೇಯಕ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೊನ್ನಾಳಿ ತಾಲ್ಲೂಕಿನಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ. ಸುಮ್ಮನೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಈ ವಿಧೇಯಕವನ್ನು 11ನೇ ತಾರೀಖೇ ತರಬೇಕಾಗಿತ್ತು. What prevented you yesterday? ನೀವು ಸಾಯಂಕಾಲ ಸದನವನ್ನು ಬೇಗ ಮುಂದೂಡಬೇಕು ಎಂದು ಹೇಳುತ್ತೀರಿ. ಎರಡನೆಯದಾಗಿ, ನಮ್ಮ ಅಡ್ಜರ್ನ್ ಮೋಷನ್ ಪ್ರಸ್ತಾಪಿಸಲೂ ಬಿಡುವುದಿಲ್ಲ. ಚರ್ಚೆಗೆ ನೀವು ಅವಕಾಶ ಮಾಡಿಕೊಡಿ ಎಂದರೆ ಅದಕ್ಕೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಭಿನ್ನವಿಸಿಕೊಳ್ಳುತ್ತೇನೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಧೇಯಕವನ್ನು ಸದನದಲ್ಲಿ ಅಂಗೀಕಾರಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿಷಯವನ್ನು ನಾವು ಪ್ರಸ್ತಾಪ ಮಾಡಿದೆವು. ಆದರೆ ಅದು ಅಜೆಂಡಾದಲ್ಲಿ ಬರದೇ ಇದ್ದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ವಿಶೇಷವಾಗಿ ಇದನ್ನು ನಮೂದಿಸಿ ನಮಗೆ ಈ ವಿಧೇಯಕವನ್ನು ಸದನದಲ್ಲಿ ಮಂಡಿಸಲು ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಟ್ಟರು. ಅದಾದ ನಂತರ ಈ ದಿವಸವೇ ಪರ್ಯಾಲೋಚನೆಗೆ ಅವಕಾಶ ಮಾಡಿಕೊಡಬೇಕೆಂದು ಈ ವಿಧೇಯಕವನ್ನು ಬೆಳಿಗ್ಗೆಯೇ ಇಲ್ಲಿ ಮಂಡಿಸಲಾಯಿತು. ಈಗ ಅದು ಪರ್ಯಾಲೋಚನಾ ಹಂತಕ್ಕೆ ಬಂದಿದೆ. 14ನೇ ತಾರೀಖಿನೊಳಗಾಗಿ ಮುಖ್ಯವಾದ ಈ ವಿಧೇಯಕವನ್ನು ನಾವಿಲ್ಲಿ ಅಂಗೀಕರಿಸಲೇಬೇಕಾಗಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಒಂದು ಕಡೆ ನಾವು ಬೇಗ ಹೋಗಬೇಕು ಎಂದು ಹೇಳಿ ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತೀರಿ.

ಉಪಾಧ್ಯಕ್ಷರು : ನಾವು ಕುಳಿತುಕೊಳ್ಳಲಿಕ್ಕೆ ತಯಾರಿದ್ದೇವೆ. ನೀವು ಮತ್ತು ಪತ್ರಕರ್ತರು ಇದಕ್ಕೆ ತಯಾರಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನಂತೂ ನೀವೆಲ್ಲಾ ಬರುವುದಕ್ಕೆ ಮಂಚೆಯೇ ಅಂದರೆ ಬೆಳಿಗ್ಗೆ 9 ಗಂಟೆಗೇ ವಿಧಾನ ಸೌಧಕ್ಕೆ ಬಂದು ರಾತ್ರಿ 9 ಗಂಟೆಗೆ ವಾಪಸ್ ಹೋಗುತ್ತೇನೆ. ತಾವೆಲ್ಲರೂ ಅಟ್‌ಲೀಸ್ಟ್ ಅಲ್ಲಿ ಇಲ್ಲಿ ರೆಸ್ಟ್ ತೆಗೆದುಕೊಳ್ಳುತ್ತಿರುತ್ತೀರಿ...

(ಗೊಂದಲ)

(ಅಧ್ಯಕ್ಷರ ಆಪ್ತಣೆ ಮೇರೆಗೆ ಚರ್ಚೆ)

ರಾಜ್ಯದಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆ ಕುರಿತು

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ಸಾಯಂಕಾಲ 4 ಗಂಟೆಗೆ ಪ್ರಶ್ನೋತ್ತರ ತೆಗೆದುಕೊಂಡರೂ ನಾವು ಇತರ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿದ್ದೇವೆ. ಮಾನ್ಯ ಉಪಾಧ್ಯಕ್ಷರೇ, ಈಗ ಏನಾಗಿದೆ ಅಂದರೆ, ಹೊನ್ನಾಳಿ ತಾಲ್ಲೂಕು ದಾವಣಗೆರೆಗೆ ಸೇರುವುದು ಬೇಡ, ಅದು ಶಿವಮೊಗ್ಗ ಜಿಲ್ಲೆಯಲ್ಲೇ ಇರಲಿ ಎಂದು ಗಲಾಟೆಗಳಾಗಿ ....

6.40 ಪಿಎಂ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಜಿಲ್ಲಾ ವಿಂಗಡಣೆ ಮಾಡುವುದಕ್ಕೆ ನಿಮ್ಮಿಂದ ಏನಾದರೂ ವಿರೋಧ ಇದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ವಿರೋಧ ಇಲ್ಲ. ನಾವು ಜಿಲ್ಲಾ ವಿಂಗಡಣೆಗೆ ರೆಡಿ ಇದ್ದೇವೆ. ನಾವು ವಿರೋಧ ಮಾಡುತ್ತಿಲ್ಲ.